

ಡಾ. ಎಸ್. ರಾಮಮೂರ್ತಿ

# 6-8-2015ರಿಂದ 12-8-2015ರವರೆಗೆ



ಮೇಷ

ಕೆಲಸ ಕಾರ್ಯಗಳು ಸರಾಗವಾಗಿ ನಡೆಯುವುವು. ಮಕ್ಕಳ ವಿಚಾರದಲ್ಲಿ ಸಂತೋಷವಾಗುವುದು. ಆತ್ಮೀಯರ ಸಹಾಯ ಲಭಿಸುವುದು. ವ್ಯಾಪಾರದಲ್ಲಿ ಲಾಭ ವೃದ್ಧಿಯಾಗುವುದು. ಬಂಧುಗಳೊಂದಿಗಿನ ಮನಸ್ತಾಪ ದೂರವಾಗುವುದು. ತಕರಾರುಗಳಲ್ಲಿ ನ್ಯಾಯ ದೊರಕುವುದು. ವಿದ್ಯಾಭ್ಯಾಸದಲ್ಲಿ ಪ್ರಗತಿ ಹಾಗೂ ಮನಃಶಾಂತಿ. ಶುಭದಿನ: 9; ಗಣಪತಿ, ದುರ್ಗಾ ಅಷ್ಟೋತ್ತರ ಪಠಿಸಿ.



ವೃಷಭ

ವಾರದ ಆರಂಭದಲ್ಲಿ ವಿಪರೀತ ಶ್ರಮ. ಆಟಪಾಠಗಳಲ್ಲಿ ನಿರಾಸಕ್ತಿ. ಆರೋಗ್ಯ ವ್ಯತ್ಯಯ. ವೃತ್ತಿ ಪ್ರವೃತ್ತಿಗಳಲ್ಲಿ ಹಿನ್ನಡೆ. ಶತ್ರುಭೀತಿ. ವಾರದ ಮಧ್ಯಭಾಗದಿಂದ ಅನುಕೂಲ. ಉತ್ಸಾಹ ಹೆಚ್ಚುವುದು. ಪತ್ರ ವ್ಯವಹಾರಗಳಲ್ಲಿ ಸಫಲತೆ. ಉದ್ಯೋಗದಲ್ಲಿ ಮನಃಶಾಂತಿ. ಹಿತೈಷಿಗಳ ಭೇಟಿ. ಗಣ್ಯರಿಂದ ಸಲಹೆ. ಲೇವಾ ದೇವಿಗಳಲ್ಲಿ ಲಾಭ. ಶುಭದಿನ: 10; ಲಕ್ಷ್ಮೀ, ವಿಷ್ಣು ಅಷ್ಟೋತ್ತರ ಪಠಿಸಿ.



ಮಿಥುನ

ವಾರದ ಆರಂಭದಲ್ಲಿ ಸಂತಸ. ನಿರೀಕ್ಷೆಯಂತೆ ಕಾರ್ಯ ಸಾಧನೆ. ವ್ಯಾಪಾರದಲ್ಲಿ ಲಾಭ. ವಿರೋಧಿಗಳಿಗೆ ಹಿನ್ನಡೆ. ಹಿತಸಂದೇಶ. ವಾರದ ಮಧ್ಯಭಾಗದಲ್ಲಿ ಅಧಿಕ ಖರ್ಚು. ಮೋಸವಾಗುವ ಸಾಧ್ಯತೆ. ವಾಹನಗಳಿಂದ ಖರ್ಚು. ಆರೋಗ್ಯ ವ್ಯತ್ಯಯ. ಲೆಕ್ಕಪತ್ರಗಳಲ್ಲಿ ತಪ್ಪಾಗುವಿಕೆ. ಉದ್ಯೋಗದಲ್ಲಿ ಒತ್ತಡ. ವ್ಯವಹಾರಗಳಲ್ಲಿ ಹಾನಿ. ಶುಭದಿನ: 7; ಗಣಪತಿ, ಲಕ್ಷ್ಮೀ ಅಷ್ಟೋತ್ತರ ಪಠಿಸಿ.



ಕಟಕ

ವಾರದ ಮಧ್ಯಭಾಗದವರೆಗೂ ಅನುಕೂಲ. ಸಮಯಕ್ಕೆ ಸರಿಯಾಗಿ ಕೆಲಸಗಳು ಮುಗಿಯುವುದು. ಹಿರಿಯರಿಂದ ಹೊಗಳಿಕೆ. ಆದಾಯ ವೃದ್ಧಿ. ಕ್ರಯ ವಿಕ್ರಯಗಳಲ್ಲಿ ಲಾಭ. ಕುಟುಂಬ ಸದಸ್ಯರಲ್ಲಿ ಒಮ್ಮತ. ತಾಳ್ಮೆ ಹೆಚ್ಚುವುದು. ವಾರಾಂತ್ಯದಲ್ಲಿ ಒತ್ತಡ. ನಿರ್ಧಾರಗಳನ್ನು ತೆಗೆದುಕೊಳ್ಳಲು ಹಿಂಜರಿಕೆ. ಅನಾರೋಗ್ಯ. ಶುಭದಿನ: 8; ಗಣಪತಿ, ದುರ್ಗಾ ಅಷ್ಟೋತ್ತರ ಪಠಿಸಿ.



ಸಿಂಹ

ಉದ್ಯೋಗ ವೃತ್ತಿ ವ್ಯವಹಾರಗಳು ನಿರೀಕ್ಷೆಯಂತೆ ನಡೆದು ಮನಃಶಾಂತಿ ಲಭಿಸುವುದು. ಹಿರಿಯರಿಂದ ಸಹಾಯ ಹಾಗೂ ಸಲಹೆ ದೊರಕುವುದು. ಸಂದೇಶಗಳು ಸಂತಸ ಉಂಟುಮಾಡುವುದು. ಸಾಹಿತ್ಯದಲ್ಲಿ ಆಸಕ್ತಿ ಹೆಚ್ಚುವುದು. ಖರ್ಚು ನಿಯಂತ್ರಣಕ್ಕೆ ಬರುವುದು. ಗೃಹ ನವೀಕರಣ ಯೋಜನೆ ಸಫಲವಾಗುವುದು. ಶುಭದಿನ: 10; ಗಣಪತಿ, ಲಕ್ಷ್ಮೀ ಅಷ್ಟೋತ್ತರ ಪಠಿಸಿ.



ಕನ್ಯಾ

ವಾರದ ಆರಂಭದಲ್ಲಿ ಭಯ. ಉದ್ಯೋಗದಲ್ಲಿ ತಪ್ಪುಗಳಾಗುವುದು. ವ್ಯಾಪಾರ ವಹಿವಾಟಿನಲ್ಲಿ ಹಾನಿ. ಸಣ್ಣಪುಟ್ಟ ಪೆಟ್ಟಾಗುವ ಸಾಧ್ಯತೆ. ವಾರದ ಮಧ್ಯಭಾಗದಿಂದ ಅನುಕೂಲ. ಧೈರ್ಯ ಪ್ರಾಪ್ತಿ. ಕುಟುಂಬ ಸದಸ್ಯರಲ್ಲಿ ಒಮ್ಮತ. ದೈವೀಕ ಕಾರ್ಯ ಯೋಜನೆ. ಕೆಲಸ ಕಾರ್ಯಗಳಲ್ಲಿ ಯಶಸ್ಸು. ಲೇವಾದೇವಿಗಳಲ್ಲಿ ಲಾಭ. ಶುಭದಿನ: 10; ಗಣಪತಿ, ದುರ್ಗಾ ಅಷ್ಟೋತ್ತರ ಪಠಿಸಿ.



ತುಲಾ

ವಾರದ ಆರಂಭದಲ್ಲಿ ಶಾಂತಿ ಸಮಾಧಾನ. ಉತ್ಸಾಹದಿಂದ ಕಾರ್ಯ ಸಾಧನೆ. ವ್ಯಾಪಾರದಲ್ಲಿ ನಿರೀಕ್ಷಿತ ಲಾಭ. ಬಂಧುಮಿತ್ರರಿಂದ ಹೊಗಳಿಕೆ. ವಾಹನ ಸೌಖ್ಯ. ವಾರದ ಮಧ್ಯಭಾಗದಲ್ಲಿ ಆಲಸ್ಯ. ಅಧಿಕ ಖರ್ಚು. ಅಕಾಲ ಭೋಜನ. ವೃತ್ತಿ ಪ್ರವೃತ್ತಿಗಳಲ್ಲಿ ಒತ್ತಡ. ನಿದ್ರಾಹೀನತೆ. ವಿರೋಧಿಗಳಿಂದ ಉಪದ್ರವ. ವಾರಾಂತ್ಯದಲ್ಲಿ ಗೌರವ, ಪ್ರಗತಿ. ಶುಭದಿನ: 7; ಲಕ್ಷ್ಮೀ, ವಿಷ್ಣು ಅಷ್ಟೋತ್ತರ ಪಠಿಸಿ.



ವೃಶ್ಚಿಕ

ವಾರದ ಮಧ್ಯಭಾಗದವರೆಗೂ ಸಂತಸ. ಅಡೆತಡೆಯಿಲ್ಲದೆ ನಡೆಯುವ ಕೆಲಸ ಕಾರ್ಯಗಳು. ಮಿತ್ರರಿಂದ ಧೈರ್ಯ ಪ್ರಾಪ್ತಿಯಾಗುವ ಮಾತುಗಳು. ಲೇವಾದೇವಿಗಳಲ್ಲಿ ಲಾಭ. ಕ್ರೀಡೆಯಲ್ಲಿ ಭಾಗವಹಿಸುವ ಆಸಕ್ತಿ. ಸಾಹಿತ್ಯ, ಸಂಶೋಧನೆಯಲ್ಲಿ ಪ್ರಗತಿ. ವಾರಾಂತ್ಯದಲ್ಲಿ ಬೇಸರ. ವಿರೋಧಿಗಳಿಂದ ತೊಂದರೆ. ವೃತ್ತಿಯಲ್ಲಿ ಹಿನ್ನಡೆ. ಶುಭದಿನ: 9; ಗಣಪತಿ, ದುರ್ಗಾ ಅಷ್ಟೋತ್ತರ ಪಠಿಸಿ.



ಧನಸ್ಸು

ಒತ್ತಡ ನಿವಾರಣೆಯಾಗುವುದು. ಕಾರ್ಯಗಳು ಸಮಯಕ್ಕೆ ಸರಿಯಾಗಿ ಮುಗಿಯುವುದು. ವ್ಯಾಪಾರದಲ್ಲಿ ಪೈಪೋಟಿಯಿದ್ದರೂ ಲಾಭ ಪ್ರಾಪ್ತಿ. ಕುಟುಂಬ ಸದಸ್ಯರಲ್ಲಿ ಒಮ್ಮತ. ಹಿತಮಿತ ಮಾತುಗಳಿಂದ ಗೌರವ. ಯಂತ್ರೋಪಕರಣಗಳು ಸರಾಗವಾಗಿ ನಡೆಯುವುದು. ಮಕ್ಕಳು ಹೇಳಿದಂತೆ ನಡೆದುಕೊಳ್ಳುವರು. ಪತ್ರಾಗಮನ. ಶುಭದಿನ: 10; ಗಣಪತಿ, ಲಕ್ಷ್ಮೀ ಅಷ್ಟೋತ್ತರ ಪಠಿಸಿ.



ಮಕರ

ವಾರದ ಆರಂಭದಲ್ಲಿ ಏನಾದರೊಂದು ಸಮಸ್ಯೆ. ಕೋಪ ಉಂಟಾಗುವ ಘಟನೆ. ಸಹೋದ್ಯೋಗಿಗಳಿಂದ ಅಸಹಕಾರ. ವೃತ್ತಿವ್ಯವಹಾರಗಳಲ್ಲಿ ಒತ್ತಡ. ವಾರದ ಮಧ್ಯಭಾಗದಿಂದ ಮನಃಶಾಂತಿ. ಸ್ಥಿರ ಮನಸ್ಸು. ಉತ್ಸಾಹದಿಂದ ಕಾರ್ಯಸಾಧನೆ. ಹಿತೈಷಿಗಳೊಂದಿಗೆ ಚರ್ಚೆ. ಪ್ರಯಾಣ ಸೌಖ್ಯ. ಬರಬೇಕಾದ ಹಣ ಬರುವುದು. ಶುಭದಿನ: 10; ಲಕ್ಷ್ಮೀ, ವಿಷ್ಣು ಅಷ್ಟೋತ್ತರ ಪಠಿಸಿ.



ಕುಂಭ

ವಾರದ ಆರಂಭದಲ್ಲಿ ಸಂತಸ. ದೃಢ ಮನಸ್ಸು. ಶುಭಕಾರ್ಯ ಚಿಂತನೆ. ಆಪ್ತರ ಭೇಟಿ. ಉದ್ಯೋಗ ವೃತ್ತಿಗಳಲ್ಲಿ ಪ್ರಗತಿ. ವಾರದ ಮಧ್ಯಭಾಗದಲ್ಲಿ ಆತಂಕ. ಅಪರಿಚಿತರಿಂದ ಮೋಸದ ಸಾಧ್ಯತೆ. ಲೇವಾದೇವಿಗಳಲ್ಲಿ ನಷ್ಟ. ಸಂದೇಶಗಳ ವಿಳಂಬ. ವಾಹನಗಳಿಂದ ಖರ್ಚು. ವಾರಾಂತ್ಯದಲ್ಲಿ ಸಮಾಧಾನ. ಗಣ್ಯರಿಂದ ಸಹಾಯ. ಶುಭದಿನ: 7; ಗಣಪತಿ, ವಿಷ್ಣು ಅಷ್ಟೋತ್ತರ ಪಠಿಸಿ.



ಮೀನ

ವಾರದ ಮಧ್ಯಭಾಗದವರೆಗೂ ಸಮಾಧಾನ. ನಿರೀಕ್ಷೆಯಂತೆ ಕಾರ್ಯ ಸಿದ್ಧಿ. ಆಟ ಪಾಠಗಳಲ್ಲಿ ಮೇಲುಗೈ. ವ್ಯಾಪಾರದಲ್ಲಿ ಸೂಕ್ತ ಲಾಭ. ಅಧಿಕಾರಿ ವರ್ಗದವರಿಂದ ಪ್ರಶಂಸೆ. ಪತ್ರ ವ್ಯವಹಾರಗಳಲ್ಲಿ ಸಫಲತೆ. ಪ್ರಯಾಣ ಸೌಖ್ಯ. ಪುರಾತನ ವಸ್ತುಗಳ ಸಂಗ್ರಹದಲ್ಲಿ ಆಸಕ್ತಿ. ವಾರಾಂತ್ಯದಲ್ಲಿ ಬೇಸರ. ಮಕ್ಕಳ ಒತ್ತಡ. ಶುಭದಿನ: 9; ಗಣಪತಿ, ಲಕ್ಷ್ಮೀ ಅಷ್ಟೋತ್ತರ ಪಠಿಸಿ.